Financial Aid for Sericulture Farmers in Dakshina Kannada District.

110 ANANDA KUNDA HEGDE (Brahmavar):—Will the Chief Minister be pleased to state.—

(a) total subsidy amount extended to the Sericulturists of Dakshina Kannada District;

(b) is there any proposal before Government to start a Government Cocoon Market in Dakshina Kannada District?

SRI R. GUNDU RAO (Chief Minister).—

(a) In Dakshina Kannada District subsidies like assistance for supply of Mulbery cuttings construction of Rearing House, Purchase of Rearing equipments and stipend to sericulture trainees etc., have been extended to an extent of Rs. 3,34,096-00 so far to the sericulturists under Western Ghats Developmental Scheme.

(b) Yes, the schemes have been incorporated in the programme for 1981-82 in Western Ghats Developmental Scheme and District Rural Development Scheme.

ಶ್ರೀ ಆನಂದಕುಂದ ಹೆಗ್ಡೆ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆರಂಭಿಸಲ್ಪಟ್ಟ ರೇಷ್ಮೆ ಬೆಳೆಗಾರರಿಗೆ ಈವರೆಗೆ ಕೊಟ್ಟಿರುವ ಸರ್ಕಾರದ ಸಹಾಯಧನದ ಮೊತ್ತವೆಷ್ಟು? ಎಂದು ನಾನು ಕೇಳಿರುವ ಪ್ರಶ್ನೆಗೆ ತಾವು ಜಿಲ್ಲೆಯಲ್ಲಿ ರೇಷ್ಮೆ ಕೃಷಿ ಶಿಕ್ಷಣಕ್ಕಾಗಿ, ಶಿಷ್ಯವೇತನಕ್ಕಾಗಿ ಇನ್ನೂ ಮುಂತಾದ್ದಕ್ಕೆಲ್ಲಾ ಸೇರಿಸಿ ಒಟ್ಟು ವಿವರ್ಣನ್ನು ತೋರಿಸಿದ್ದೀರಿ. ರೇಷ್ಮೆ ಬೆಳೆಗಾರರಿಗೆ ಎಕರೆಗೆ ೫ ಸಾವಿರ ರೂಪಾಯಿಯಂತೆ ಸರ್ಕಾರದವರು ಸಹಾಯಧನವನ್ನು ಕೊಡುವ ಧೋರಣೆ ಏನಿದೆ ಇದರಲ್ಲಿರತಕ್ಕ ಅಸಮಾನತೆಯನ್ನು ಹೋಗಲಾಡಿಸುತ್ತೀರಾ?

ಇನ್ನು ಎರಡನೆಯದಾಗಿ ದಕ್ಷಿಣ ಕನ್ನಡ ಜಿಲ್ಲೆಗೆ ರೇಷ್ಮೆ ಮಾರುಕಟ್ಟೆಯನ್ನು ನೀಡುವ ಯೋಜನೆ ಸರ್ಕಾರದ ಮುಂದಿದೆಯೆ ಎಂದು ನಾನು ಕೇಳಿರುವ ಪ್ರಶ್ನೆಗೆ "ಈ ಯೋಜನೆಯನ್ನು ೧೯೮೧-೮೨ರ ಸಾಲಿನ ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆ ಹಾಗೂ ಜಿಲ್ಲಾ ಗ್ರಾಮೀಣ ಅಭಿವೃದ್ಧಿ ಸಂಸ್ಥೆ ಯೋಜನೆಗಳಲ್ಲಿ ಸೇರಿಸಲಾಗಿದೆ" ಎಂದು ಉತ್ತರ ಕೊಟ್ಟಿದ್ದೀರಿ. ಇದು ಸರಿಯಲ್ಲ. ನಮಗೆ ಇದರ ಬಗ್ಗೆ ಖಚಿತವಾದ ಉತ್ತರವನ್ನು ಕೊಡಬೇಕು.

ಶ್ರೀ ಆರ್. ಗುಂಡೂರಾವ್.—ಈ ಯೋಜನೆಯನ್ನು ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆ ಹಾಗೂ ಜಿಲ್ಲಾ ಗ್ರಾಮೀಣ ಅಭಿವೃದ್ಧಿ ಸಂಸ್ಥೆ ಯೋಜನೆಯಲ್ಲಿ ಸೇರಿಸುವುದಾಗಿ ಹೇಳಿದ್ದೇವೆ. ಅಲ್ಲದೇ ಸಹಾಯಧನವನ್ನು ಕೊಡುವ ಬಗೆಯೂ ನಾವು ಹೇಳಿದ್ದೇವೆ. ಒಟ್ಟಿನಲ್ಲಿ ಮೈಸೂರು ಜಿಲ್ಲೆಗೆ ಎಲ್ಲ ರೀತಿಯ ಸಹಾಯಧನವನ್ನು ನೀಡಬೇಕೆಂಬುದು ಸರ್ಕಾರದ ಉದ್ದೇಶವಿದೆ.

ಶ್ರೀ ಆನಂದಕುಂದ ಹೆಗ್ಡೆ.—ಕೆಲವು ಜನರಿಗೆ ೫ ಸಾವಿರ ರೂ.ಗಳ ಸಹಾಯಧನ ಸಿಕ್ಕಿದೆ, ಇನ್ನು ಕೆಲವರಿಗೆ ಸಿಕ್ಕಿಲ್ಲ. ಆದ್ದರಿಂದ ಇದನ್ನು ತಾವು ಪರಿಶೀಲಿಸಿ ಕೊಡಿಸುತ್ತೀರಾ?

ಶ್ರೀ ಆರ್. ಗುಂಡೂರಾವ್.—ಈ ಸಹಾಯಧನ ಎಲ್ಲೆಲ್ಲಿಗೆ ಬೇಕೆಂದು ಕೇಳಿಕೆ ಬರುತ್ತದೋ ಅಲ್ಲಲ್ಲಿಗೆ ಕೊಡುತ್ತಾರೆ: